**ಪಿ.ಡಬ್ಲ್ಯು-3**

**ಸಾಕ್ಷಿಯನ್ನು ದಿನಾಂಕಃ 28.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ.ಜಿ.ಎಸ್, ವಕೀಲರಿಂದಃ**

ಈ ದಾವೆಯನ್ನು ಯಾವ ಸರ್ವೆ ನಂಬರಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ವಾದಿಗಳ ಜಮೀನಿನಿಂದ ನಮ್ಮ ಜಮೀನು ತುಂಬಾ ದೂರವಿರುತ್ತದೆ. ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರವನ್ನು ನಮ್ಮ ವಕೀಲರು ತಯಾರಿಸಿದ್ದು, ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ಸರ್ವೆ ನಂ. 450/2 ರ ಪಹಣಿ ಪತ್ರಿಕೆಯನ್ನು ನಾನು ನೋಡಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಗಳ ಹೆಸರು ಇದ್ದರು ಕೂಡ ದಾವಾ ಸ್ವತ್ತಿನಲ್ಲಿ ವಾದಿಗಳೇ ಸ್ವಾಧೀನದಲ್ಲಿರುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದರೂ ವಾದಿಗಳಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**